**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಇದರ ವತಿಯಿಂದ ಹೊರನಾಡ ಕನ್ನಡಿಗರ ಸಂಘ- ಸಂಸ್ಥೆಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡುವ ಕುರಿತು ಮಾರ್ಗಸೂಚಿಗಳು.

ಓದಲಾಗಿದೆ: ಸದಸ್ಯ ಕಾರ್ಯದರ್ಶಿ, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಇವರ ಕಡತ ಸಂಖ್ಯೆ:ಅಭಾಸಕ/ಸಕಾ/23/2018, ದಿನಾಂಕ:17.08.2019.

ಪ್ರಸ್ತಾವನೆ:

ಮೇಲೆ ಓದಲಾದ ಕಡತದಲ್ಲಿ ಸದಸ್ಯ ಕಾರ್ಯದರ್ಶಿ, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಇವರು ಹೊರ ದೇಶಗಳಲ್ಲಿ ನೆಲೆಸಿರುವ ಕನ್ನಡಿಗರ ಹಿತಾಸಕ್ತಿ, ಕ್ಷೇಮಾಭಿವೃದ್ಧಿ, ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಭಾಗವಹಿಸಲು ಅನುಕೂಲವಾಗುವಂತೆ ಅನಿವಾಸಿ ಭಾರತೀಯ ಕನ್ನಡಿಗರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಕ್ರಿಯಾಯೋಜನೆಯನ್ನು ರೂಪಿಸಲಾಗಿದೆ. ಅನಿವಾಸಿ ಕನ್ನಡಿಗರ ಸಂಘ-ಸಂಸ್ಥೆಗಳು ನಡೆಸುವ ಸಾಂಸ್ಕೃತಿಕ ಉತ್ಸವಗಳು ಮುಂತಾದ ಚಟುವಟಿಕೆಗಳಿಗೆ ಕ್ರಿಯಾಯೋಜನೆಯಲ್ಲಿ ಅನುದಾನವನ್ನು ಕಾಯ್ದಿರಿಸಲಾಗಿದೆ. ಆದುದರಿಂದ, ಅನಿವಾಸಿ ಕನ್ನಡಿಗರ ಸಂಘ-ಸಂಸ್ಥೆಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡಲು ಮಾರ್ಗಸೂಚಿಗಳು ಹಾಗೂ ಷರತ್ತುಗಳನ್ನು ಹೊರಡಿಸಲು ಮತ್ತು ಅನಿವಾಸಿ ಕನ್ನಡಿಗರ ಸಂಘ-ಸಂಸ್ಥೆಗಳು ಸಲ್ಲಿಸಬೇಕಾಗಿರುವ ದಾಖಲೆಗಳ ವಿವರಗಳನ್ನು ತಿಳಿಸಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳನ್ನು ಪರಿಶೀಲಿಸಿ, ಈ ಕೆಳಕಂಡಂತೆ ಸರ್ಕಾರದ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 98 ಇಆಸು 2019, ಬೆಂಗಳೂರು, ದಿನಾಂಕ:23.09.2019.**

ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಇದರ ವತಿಯಿಂದ ಅನಿವಾಸಿ ಕನ್ನಡಿಗರ ಹಿತಾಸಕ್ತಿ, ಕ್ಷೇಮಾಭಿವೃದ್ಧಿ, ಕಲೆ, ಸಾಹಿತ್ಯ, ಸಾಂಸ್ಕೃತಿಕ ಉತ್ಸವಗಳು ಮುಂತಾದ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಅನಿವಾಸಿ ಕನ್ನಡಿಗರ ಸಂಘ-ಸಂಸ್ಥೆಗಳು ನಡೆಸುವ ಸಾಂಸ್ಕೃತಿಕ ಉತ್ಸವ ಮುಂತಾದ ಚಟುವಟಿಕೆಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡಲು ಇದರೊಂದಿಗಿರುವ

...2)

Scanned by CamScanner

ಅನುಬಂಧದಲ್ಲಿ ಮಾರ್ಗಸೂಚಿಗಳನ್ನು ಅನಿವಾಸಿ ಕನ್ನಡಿಗರ ಸಂಘ-ಸಂಸ್ಥೆಗಳು ಸಲ್ಲಿಸಬೇಕಾಗಿರುವ ದಾಖಲೆಗಳ ವಿವರಗಳನ್ನು ತಿಳಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್. ಎಸ್. ಸುಜಾತ)

ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಆ.ಸು-ತರಬೇತಿ).

ದೂರವಾಣಿ ಸಂಖ್ಯೆ:08022032655

ಇವರಿಗೆ:

1. ಮಹಾಲೇಖಪಾಲರು, (ಲೆಕ್ಕಪತ್ರ)/(ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, ಖಜಾನೆ-2 ಮತ್ತು ಪದನಿಮಿತ್ತ ಖಜಾನೆ ಆಯುಕ್ತರು, ಆರ್ಥಿಕ ಇಲಾಖೆ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿ ನಗರ, ಬೆಂಗಳೂರು-560009
4. ಸದಸ್ಯ ಕಾರ್ಯದರ್ಶಿ, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ, ವಿಕಾಸ ಸೌಧ, ಬೆಂಗಳೂರು.
5. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಡಾ:ಅಂಬೇಡ್ಕರ್ ವೀಧಿ, ಬೆಂಗಳೂರು.
6. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-12), ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು.ಇ (ಲೆಕ್ಕಪತ್ರ 1&2), ವಿಧಾನಸೌಧ, ಬೆಂಗಳೂರು.

...3)

Scanned by CamScanner

ಪ್ರತಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ), ಬಹುಮಹಡಿ ಕಟ್ಟಡ, ಬೆಂಗಳೂರು.
2. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ), ಬಹುಮಹಡಿ ಕಟ್ಟಡ, ಬೆಂಗಳೂರು.
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

Scanned by CamScanner

## ಅನುಬಂಧ

## I. ಸಹಾಯ ಧನವನ್ನು ಬಿಡುಗಡೆ ಮಾಡಲು ಮಾರ್ಗಸೂಚಿಗಳು

1. ಸಹಾಯ ಧನ ಕೋರುವ ಹೊರದೇಶದ ಸಂಸ್ಥೆಗಳು ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಇಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳತಕ್ಕದ್ದು.

2. ಹೊರದೇಶದ ಸಂಸ್ಥೆಗಳು ಅಲ್ಲಿಯ ನಿಯಮಾನುಸಾರ ನೋಂದಣಿ ಮಾಡಿಸಿರಬೇಕು. ಆರ್ಥಿಕ ವರ್ಷದ ಅಂತ್ಯದಲ್ಲಿ ವಾರ್ಷಿಕ ಸಭೆ ನಡೆಸಿ, ಪದಾಧಿಕಾರಿಗಳ ಪಟ್ಟಿ, ಆಡಿಟ್ ವರದಿಯೊಂದಿಗೆ ಅಕೌಂಟ್ ಫೈಲಿಂಗ್ ಮಾಡಿರುವ ಸ್ವೀಕೃತ ಪತ್ರ ನೀಡಬೇಕು. ನೋಂದಣಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

3. ನೋಂದಣಿಯಾದ ಅರ್ಹ ಸಂಸ್ಥೆಗಳು ಕನ್ನಡ ಭಾಷೆ, ಸಾಹಿತ್ಯ, ಸಂಗೀತ, ನೃತ್ಯ ,ಲಲಿತಕಲೆ, ನಾಟಕ, ಜಾನಪದ, ಯಕ್ಷಗಾನ ಮುಂತಾದ ಕ್ಷೇತ್ರಗಳಲ್ಲಿ ಸತತವಾಗಿ ಕನಿಷ್ಠ 2 ವರ್ಷಗಳ ಚಟುವಟಿಕೆ ನಡೆಸಿರಬೇಕು.

4. ಅನಿವಾಸಿ ಭಾರತೀಯ ಸಮಿತಿಯಿಂದ ಸಹಾಯಧನ ಅಪೇಕ್ಷಿಸುವ ಸಂಘ - ಸಂಸ್ಥೆಗಳು ನಿರ್ದಿಷ್ಟ ಕಾರ್ಯಕ್ರಮದ ರೂಪು-ರೇಷೆ ಸಹಿತ ಪರಿಪೂರ್ಣ ಮಾಹಿತಿಯೊಂದಿಗೆ ನಿಗದಿತ ಅರ್ಜಿ ಮೂಲಕ ಮನವಿಯನ್ನು ಕನಿಷ್ಠ 45 ದಿನಗಳ ಮುಂಚಿತವಾಗಿ ನೀಡಬೇಕು.

5. ಅನಿವಾಸಿ ಭಾರತೀಯ ಸಮಿತಿಯಿಂದ ಸಹಾಯಧನ ಪಡೆಯುವ ಸಂಸ್ಥೆಗಳು ಮಂಜೂರಾದ ಹಣವನ್ನು ಉದ್ದೇಶಿತ ಕಾರ್ಯಕ್ರಮಗಳಿಗೆ ಸದ್ಬಳಕೆ ಮಾಡುವುದಾಗಿ ಹಾಗೂ ವೆಚ್ಚ ಮಾಡಿದ ನಂತರ ನಿಯಮಾನುಸಾರ ಲೆಕ್ಕಪತ್ರಗಳನ್ನು ಒದಗಿಸುವುದಾಗಿ ಕರಾರುಪತ್ರ ಸಲ್ಲಿಸತಕ್ಕದ್ದು.

6. ಎರಡು ವರ್ಷಗಳ ಆಡಿಟ್ ವರದಿ, ಹಣಬಳಕೆ ಪ್ರಮಾಣ ಪತ್ರ, ಕಾರ್ಯಕ್ರಮದ ವರದಿ ಆಮಂತ್ರಣ ಪತ್ರ (ದೃಢೀಕರಿಸಿದ), ಫೋಟೋಗಳು, ಪತ್ರಿಕಾ ವರದಿಗಳು ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕು.

7. ಸಹಾಯಧನ ಪಡೆಯಲು ನೀಡಲಾದ ಮಾಹಿತಿಯಲ್ಲಿ ತಪ್ಪುಗಳಿದ್ದಲ್ಲಿ, ಉದ್ದೇಶಿತ ಕಾರ್ಯಕ್ರಮ ಹೊರತುಪಡಿಸಿದಲ್ಲಿ ದುರುಪಯೋಗಪಡಿಸಿಕೊಂಡಲ್ಲಿ ಹಾಗೂ ಕರಾರಿನಲ್ಲಿ ಹೇಳಲಾದ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದಲ್ಲಿ ಕಾರ್ಯಕ್ರಮಗಳನ್ನು ಮಾಡದೇ ಸುಳ್ಳು ದಾಖಲೆಗಳನ್ನು ಸಲ್ಲಿಸಿದ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.

8. ಅನಿವಾಸಿ ಭಾರತೀಯ ಸಮಿತಿಯಿಂದ ಪೂರ್ವಾನುಮೋದನೆ ಇಲ್ಲದೆ ನಡೆಸಿರುವ ಯಾವುದೇ ಕಾರ್ಯಕ್ರಮಗಳು ಸಹಾಯಧನಕ್ಕೆ ಅರ್ಹವಾಗುವುದಿಲ್ಲ. ಹೀಗೆ ಮುಗಿದುಹೋದ ಕಾರ್ಯಕ್ರಮಗಳಿಗೆ ಯಾವುದೇ ಸಂದರ್ಭದಲ್ಲಿ ಘಟನೋತ್ತರ ಮಂಜೂರಾತಿ ನೀಡಲಾಗುವುದಿಲ್ಲ.

9. ಅನಿವಾಸಿ ಭಾರತೀಯ ಸಮಿತಿಯಿಂದ ಆರ್ಥಿಕ ನೆರವು ಪಡೆಯುವ ಸಂಘ-ಸಂಸ್ಥೆಗಳು ತಮ್ಮ ಕಾರ್ಯಕ್ರಮದ ಆಮಂತ್ರಣ ಪತ್ರ ಹಾಗೂ ಬ್ಯಾನರ್‌ಗಳಲ್ಲಿ ಅನಿವಾಸಿ ಭಾರತೀಯ ಸಮಿತಿಯ ಹೆಸರನ್ನು ಮುದ್ರಿಸತಕ್ಕದ್ದು ಹಾಗೂ ಕಾರ್ಯಕ್ರಮದಲ್ಲಿ ವ್ಯಾಪಕ ಪ್ರಚಾರ ಮಾಡುವುದು.

Scanned by CamScanner

## II.ಸಲ್ಲಿಸಬೇಕಾದ ದಾಖಲೆಗಳ ವಿವರ

1. ನಿಗದಿತ ಅರ್ಜಿ ನಮೂನೆ
2. ನೋಂದಣಿಯ ಮೂಲ ನಕಲು ಪ್ರತಿ ಹಾಗೂ ನವೀಕರಣದ ಪ್ರತಿ
3. ಪ್ರಸ್ತುತ ವರ್ಷದ ಅಕೌಂಟ್ ಫೈಲಿಂಗ್ ಸ್ವೀಕೃತ ಪತ್ರ (ಅನ್ವಯಿಸಿದ್ದಲ್ಲಿ)
4. ವಾರ್ಷಿಕ ಅಂತ್ಯದಲ್ಲಿ ನಡೆಸಿದ ಸಭಾ ನಡವಳಿ ಪ್ರತಿ
5. ಕಳೆದ ಎರಡು ವರ್ಷಗಳ ಕಾರ್ಯಚಟುವಟಿಕೆಗಳ ಮಾಹಿತಿ
   (ಆಮಂತ್ರಣ ಪತ್ರ, ಛಾಯಾಚಿತ್ರ, ಪತ್ರಿಕಾವರದಿ ಇತ್ಯಾದಿ)
6. ಬೈಲಾ ಪ್ರತಿ / ಎಮ್.ಓ.ಎ
7. ಕಳೆದ ಎರಡು ವರ್ಷಗಳ ಆಡಿಟ್ ವರದಿಗಳು
8. ಪದಾಧಿಕಾರಿಗಳ ಪಟ್ಟಿ (ಭಾವಚಿತ್ರ ಸಹಿತ) ಮತ್ತು ಸದಸ್ಯರ ವಿವರಗಳು [ಇ-ಮೇಲ್ ಸಹಿತ]
9. ಹಣಬಳಕೆ ಪ್ರಮಾಣ ಪತ್ರ
10. ಕಾರ್ಯಕ್ರಮದ ರೂಪುರೇಷೆ
11. ಕಾರ್ಯಕ್'ರಮದ ಅಂದಾಜು ವೆಚ್ಚಪಟ್ಟಿ
12. ಸಂಸ್ಥೆಯ ಬ್ಯಾಂಕ್ ಖಾತೆಯ ವಿವರಗಳು

ಸಹಿ/-
ಸದಸ್ಯ ಕಾರ್ಯದರ್ಶಿ
ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ.
ಕೊಠಡಿ ಸಂಖ್ಯೆ: 220ಇ ಮತ್ತು 220ಎಫ್.
ವಿಕಾಸಸೌಧ, ಬೆಂಗಳೂರು-560001.

Scanned by CamScanner